# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ

ನಂ. 09, 2ನೇ ಮಹಡಿ, 1ನೇ ಮುಖ್ಯರಸ್ತೆ, (ಹೊರವರ್ತುಲ ರಸ್ತೆ),ಕೆಂಗೇರಿ ಉಪನಗರ,ಬೆಂಗಳೂರು-60.

ಸಂಖ್ಯೆ : ಸ.ಇಂ/ವಾ-159/ವಾರ್ಡ್‌ಸಭೆ/2021-22 ದಿನಾಂಕ : 19/02/2022

**ವಾರ್ಡ್-159ರ ವಾರ್ಡ್ ಸಭೆಯ ನಡವಳಿ.**

ದಿನಾಂಕ: 19/02/2022 ರಂದು ಕೆಂಗೇರಿ ಉಪ ವಿಭಾಗ ವಾರ್ಡ್-159ರ ವಾರ್ಡ್ ಕಛೇರಿಯಲ್ಲಿ ಶ್ರೀ ನಾಗೇಂದ್ರ ನಾಯಕ್, ವಾರ್ಡ್-159ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

**ಹಾಜರಿದ್ದವರು:**

| ಕ್ರ. ಸಂ | ಸದಸ್ಯರ ಹೆಸರು | ಪದನಾಮ/ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀ ಸತ್ಯನಾರಾಯಣ | ಮಾಜಿ ಸದಸ್ಯರು (ಬಿಬಿಎಂಪಿ) | ಹಾಜರಿದ್ದರು |
| 2 | ಶ್ರೀ ನವೀನ್ ಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು ಕೆಂಗೇರಿ | ಹಾಜರಿದ್ದರು |
| 3 | ಡಾ॥ ರೇಷ್ಮ | ಆರೋಗ್ಯ ಅಧಿಕಾರಿ ಕೆಂಗೇರಿ | ಹಾಜರಿದ್ದರು |
| 4 | ಶ್ರೀ ಹೆಚ್.ಡಿ. ವೆಂಕಟೇಶ್ | ತೋಟಗಾರಿಕೆ ಪರಿವೀಕ್ಷಕರು ಬಿ.ಬಿ.ಎಂ.ಪಿ | ಹಾಜರಿದ್ದರು |
| 5 | ಶ್ರೀ ಚಂದ್ರಶೇಖರ್.ಎಂ | ಕಂದಾಯ ಪರಿವೀಕ್ಷಕರು, ವಾರ್ಡ್-159 | ಹಾಜರಿದ್ದರು |
| 6 | ಶ್ರೀ ಚಂದ್ರಶೇಖರ್.ಬಿ.ಕೆ | ಕಿರಿಯ ಇಂಜನಿಯರ್ ಬೆಸ್ಕಾಂ ಕೆಂಗೇರಿ | ಹಾಜರಿದ್ದರು |
| 7 | ಶ್ರೀ ಚಿಕ್ಕರಾಜು | ಸಹಾಯಕ ಸಬ್ ಇನ್ಸ್‌ಪೆಕ್ಟರ್, ಕೆಂಗೇರಿ ಪೊಲೀಸ್ ಠಾಣೆ | ಹಾಜರಿದ್ದರು |

ಮಾನ್ಯ ನೋಡಲ್ ಅಧಿಕಾರಿಯವರ ಸ್ವಾಗತದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

1) **ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-** ನೋಡಲ್ ಅಧಿಕಾರಿಯವರು ಕೋವಿಡ್-19ರ ಸಾಂಕ್ರಾಮಿಕ ರೋಗದ ಬಗ್ಗೆ ಹಾಗೂ ಸರ್ಕಾರ ಮತ್ತು ಬಿ.ಬಿ.ಎಂ.ಪಿ. ವತಿಯಿಂದ ನೀಡುತ್ತಿರುವ ಸೌಲಭ್ಯ/ಸೌವಲತ್ತುಗಳು, ಮತ್ತು ಕೋವಿಡ್-19 ಪರೀಕ್ಷೆಯ ಬಗ್ಗೆ ಸವಿಸ್ತಾರವಾಗಿ ಸಭೆಗೆ ವಿವರಿಸಿದರು.

   ಕೋವಿಡ್-19ರ ಲಸಿಕೆಯನ್ನು ಪಡೆಯಲು ಸಾರ್ವಜನಿಕರು ಆರೋಗ್ಯ ಪರಿವೀಕ್ಷಕರು ಮತ್ತು ಆರೋಗ್ಯಾಧಿಕಾರಿಗಳನ್ನು ಸಂಪರ್ಕಿಸಿ ಸಹಕಾರ ಪಡೆದುಕೊಳ್ಳಲು ಸಭೆಯಲ್ಲಿ ತಿಳಿಸಿದರು. ಕೋವಿಡ್ ಸುರಕ್ಷತಾ ನಿಯಮಾವಳಿಯನ್ನು ತಪ್ಪದೇ ಪಾಲಿಸಲು ಮತ್ತು ಮಾಸ್ಕ್ ಹಾಗೂ ಸ್ಯಾನಿಟೈಸರ್ ಖಡ್ಡಾಯವಾಗಿ ಉಪಯೋಗಿಸಲು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸ್ಥಳೀಯ ನಿವಾಸಿಗಳಿಗೆ ಹಾಗೂ ಬಡಾವಣೆಯ ಪ್ರತಿನಿಧಿಗಳಿಗೆ ತಿಳಿಸಲಾಯಿತು ಮತ್ತು ಕೋವಿಡ್ ಬೂಸ್ಟರ್ ಲಸಿಕೆಯನ್ನು ಪಡೆದುಕೊಳ್ಳಲು ಮತ್ತು ಇದರ ಸದುಪಯೋಗ ಪಡೆಯಲು ಭಾಗವಹಿಸಿದ್ದ ಎಲ್ಲರಿಗೂ ಕೋರಲಾಯಿತು.

REDMI NOTE 5 PRO
MI DUAL CAMERA

Scanned with CamScanner

2) ಕೆಂಗೇರಿಯಲ್ಲಿ ಬೋರ್‌ವೆಲ್‌ಗಳನ್ನು ಬಿ.ಬಿ.ಎಂ.ಪಿ. ವತಿಯಿಂದ ಕೊರೆದಿದ್ದು, ಅದರ ನಿರ್ವಹಣೆಯ ಖಾಸಗಿ ವ್ಯಕ್ತಿಗಳು ಮಾಡುತ್ತಿರುತ್ತಾರೆ. ಆದುದರಿಂದ ಪಾಲಿಕೆ ವತಿಯಿಂದ ಕೊರೆಯಲಾಗಿರುವ ಬೋರ್‌ವೆಲ್‌ಗಳ ನಿರ್ವಹಣೆಯನ್ನು ಪಾಲಿಕೆಯ ನೀರುಗಂಟಿ(ವಾಟರ್‌ಮ್ಯಾನ್)ಗಳಿಂದಲೇ ಮಾಡಿಸುವಂತೆ ಶ್ರೀ ಸತೀಶ್‌ರವರು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಅಗತ್ಯ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

3) ವಾರ್ಡ್ ನಂ.159ರ ವ್ಯಾಪ್ತಿಯಲ್ಲಿ ಬೆಸ್ಕಾಂ ಇಲಾಖೆ ವತಿಯಿಂದ ಭೂಗತ ಕೇಬಲ್‌ಗಳನ್ನು ಅಳವಡಿಸುತ್ತಿದ್ದು, ಅಲ್ಲಲ್ಲಿ ರಸ್ತೆಗಳನ್ನು ಅಗೆದಿದ್ದು, ಗುಂಡಿಗಳು ಉಂಟಾಗಿದ್ದು ವಾಹನ ಸಂಚಾರಕ್ಕೆ ಅನಾನುಕೂಲವಾಗಿರುತ್ತದೆ ಎಂಬ ವಿಷಯವನ್ನು ವಾರ್ಡ್ ಕಮಿಟಿ ಸಭೆಯಲ್ಲಿ ಪ್ರಸ್ತಾಪಿಸಲಾಯಿತು.

ಈ ಬಗ್ಗೆ ಬೆಸ್ಕಾಂನ ಸಹಾಯಕ ಅಭಿಯಂತರರಾದ ಶ್ರೀ ಚಂದ್ರ ಶೇಖರ್ ರವರು ಮಾತನಾಡಿ ಭೂಗತ ಕೇಬಲ್‌ಗಳನ್ನು ಅಳವಡಿಸಲು ಸರ್ಕಾರದಿಂದ ಅನುಮತಿ ಪಡೆಯಲಾಗಿದ್ದು, ಅದರಂತೆ ಕಾರ್ಯನಿರ್ವಹಿಸುತ್ತಿರುವುದಾಗಿ ಹಾಗೂ ರಸ್ತೆಗಳನ್ನು ಮತ್ತೆ ಯಥಾಸ್ಥಿತಿಗೆ ತರುವುದಾಗಿ ಸಭೆಗೆ ತಿಳಿಸಿದರು.

4) ಶ್ರೀ ನಾಗರಾಜು (ನಾಗರೀಕರು) ಸಭೆಯಲ್ಲಿ ಮಾತನಾಡಿ ವಿದ್ಯುತ್‌ನ್ನು ಹಾಗಾಗೇ ತೆಗೆಯುತ್ತಿರುವುದರಿಮದ ತುಂಬ ತೊಂದರೆಯಾಗುರತ್ತಿರುವುದಾಗಿ ಸಭೆಗೆ ತಿಳಿಸಿದರು.

ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಅಗತ್ಯ ಕ್ರಮ ವಹಿಸಲು ಬೆಸ್ಕಾಂ ಅಧಿಕಾರಿಯವರಿಗೆ ಸಭೆಯಲ್ಲಿ ತಿಳಿಸಿದರು.

5) ಸಂಚಾರಿ ಪೊಲೀಸ್ ಇಲಾಖೆಯಿಂದ ರೈಲ್ವೇ ಪ್ಯಾರಲಲ್ ರಸ್ತೆಯಲ್ಲಿ ಮರದ ಕೊಂಬೆಯೊಂದು ಬಾಗಿದ್ದು, ಅದು ತುಂಬಾ ಅಪಾಯಕಾರಿಯಾಗಿರುವುದಾಗಿ ಕೂಡಲೇ ಮರದ ಕೊಂಬೆಯನ್ನು ತೆರವುಗೊಳಿಸಲು ಕ್ರಮ ವಹಿಸುವಂತೆ ಸಭೆಯಲ್ಲಿ ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಅರಣ್ಯ ಇಲಾಖೆಗೆ ಪತ್ರ ಬರೆಯುವಂತೆ ಕಾರ್ಯದರ್ಶಿಯವರಿಗೆ ಸಭೆಯಲ್ಲಿ ತಿಳಿಸಿದರು.

6) ಶ್ರೀ ನವೀನ್ (ನಾಗರೀಕರು) ಸಭೆಯಲ್ಲಿ ಮಾತನಾಡಿ ಟ್ರಯೇಜ್ ಸೆಂಟರ್ ಮತ್ತು ಡ್ರೈವೇಸ್ಟ್ ಸೆಂಟರ್ ವಿದ್ಯುತ್ ಬಿಲ್ ಪಾವತಿಸಲು ಕ್ರಮ ವಹಿಸುವಂತೆ ಸಹಾಯಕ ಅಭಿಯಂತರರನ್ನು ಸಭೆಯಲ್ಲಿ ಕೋರಿದರು. ಈ ಬಗ್ಗೆ ಕ್ರಮ ವಹಿಸುವುದಾಗಿ ಸಹಾಯಕ ಅಭಿಯಂತರರು, ವಾರ್ಡ್ ನಂ.159ರವರು ತಿಳಿಸಿದರು.

7) ಶ್ರೀ ನವೀನ್ (ನಾಗರೀಕರು) ಸಭೆಯಲ್ಲಿ ಮಾತನಾಡಿ ಬೆಸ್ಕಾಂನ ಕೆಳ ವರ್ಗದ ಅಧಿಕಾರಿಗಳು ನಾಗರೀಕರ ಜೊತೆ ಸಂಯಮದಿಂದ ವರ್ತಿಸುವಂತೆ ಬೆಸ್ಕಾಂ ಸಹಾಯಕ ಅಭಿಯಂತರರಿಗೆ ಸಭೆಗೆ ತಿಳಿಸಿದರು.

8) ಡಾ|| ರೇಷ್ಮ, ಆರೋಗ್ಯ ಅಧಿಕಾರಿಯವರು ಬೆಸ್ಕಾಂ ಸಹಾಯಕ ಅಭಿಯಂತರರಿಗೆ ಟ್ರಯೇಜ್ ಸೆಂಟರ್ ತುರ್ತು ಸೇವೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರವಾದ್ದರಿಂದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಬಾರದೆಂದು ಸಭೆಗೆ ತಿಳಿಸಿದರು.

ಈ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ಸಹಾಯಕ ಅಭಿಯಂತರು, ಬೆಸ್ಕಾಂ ರವರಿಗೆ ನೋಡಲ್ ಅಧಿಕಾರಿಯವರು ಸೂಚಿಸಿದರು.

9) ಶ್ರೀಮತಿ ಅನುಪಮ ಶೆಣೈರವರು ವಿನಾಯಕ ನಗರದಲ್ಲಿ ಕಲ್ವರ್ಟ್‌ಗಳನ್ನು ಸರಿಪಡಿಸಬೇಕೆಂದು ವಾರ್ಡ್ ನಂ.159ರ ಸಹಾಯಕ ಅಭಿಯಂತರರಿಗೆ ತಿಳಿಸಿದರು.

ಈ ಬಗ್ಗೆ ಸೂಕ್ತ ಕ್ರಮ ವಹಿಸಿಸುವಂತೆ ನೋಡಲ್ ಅಧಿಕಾರಿಯವರು ವಾರ್ಡ್ ನಂ.159ರ ಸಹಾಯಕ ಅಭಿಯಂತರರಿಗೆ ತಿಳಿಸಿದರು.

10) ಶ್ರೀ ಪ್ರಭು(ನಾಗರೀಕರು) ಸಭೆಯಲ್ಲಿ ಮಾತನಾಡಿ ಕೆಂಗೇರಿ ಟೌನ್, 3ನೇ ಮುಖ್ಯರಸ್ತೆ, ಬಾಬುಸಾಹೇಬರ ಪಾಳ್ಯ, ರಾಜ್‌ಕುಮಾರ್ ಸರ್ಕಲ್ ಹಾಗೂ ರೈಲ್ವೇ ಸಮಾನಾಂತರ ರಸ್ತೆಯಲ್ಲಿ ಕಸವನ್ನು ಸಮರ್ಪಕವಾಗಿ ತೆಗೆಯುವಂತೆ ಸಭೆಗೆ ತಿಳಿಸಿದರು.

ಈ ಬಗ್ಗೆ ಕಿರಿಯ ಆರೋಗ್ಯ ಪರಿವೀಕ್ಷಕರಾದ ಶ್ರೀ ನವೀನ್ ರವರು ಮಾತನಾಡಿ ಸೂಕ್ತ ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.

11) ಶ್ರೀ ಸತ್ಯನಾರಾಯಣ (ಮಾಜಿ ಪಾಲಿಕೆ ಸದಸ್ಯರು) ರವರು ಸಭೆಯಲ್ಲಿ ಮಾತನಾಡಿ ಫುಟ್‌ಪಾತ್ ಒತ್ತುವರಿಯನ್ನು ತೆರವುಗೊಳಿಸುವಂತೆ ಬಿಬಿಎಂಪಿ ಹಾಗೂ ಪೊಲೀಸ್ ಇಲಾಖೆಯವರಿಗೆ ಸಭೆಯಲ್ಲಿ ತಿಳಿಸಿದರು.

ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಫುಟ್‌ಪಾತ್ ಒತ್ತುವರಿಯ ತೆರವು ಕಾರ್ಯಾಚರಣೆಯನ್ನು ಹಮ್ಮಿಕೊಳ್ಳುವಂತೆ ಸಭೆಗೆ ತಿಳಿಸಿದರು.

REDMI NOTE 5 PRO
MI DUAL CAMERA

Scanned with CamScanner

12) ಶ್ರೀ ನಾಗರಾಜು(ನಾಗರಿಕರು) ಮಾತನಾಡಿ ವಾರ್ಡ್ ನಂ.159ರಲ್ಲಿ ಯಾರಾದರು ಮರಣ ಹೊಂದಿದ್ದಲ್ಲಿ ಮರಣ ಪ್ರಮಾಣ ಪತ್ರವನ್ನು ಕೂಡಲೇ ನೀಡುವಂತೆ ಡಾ॥ ರೇಷ್ಮರವರಿಗೆ ಮನವಿ ಮಾಡಿದರು.

ಈ ಬಗ್ಗೆ ಡಾ॥ ರೇಷ್ಮರವರು ಮಾತನಾಡಿ ತಮ್ಮ ಪರಿಮಿತಿಯಲ್ಲಿ ನಾವು ಕಾರ್ಯನಿರ್ವಹಿಸುತ್ತೇವೆ ಎಂದು ಸಭೆಗೆ ತಿಳಿಸಿದರು.

13) ಶ್ರೀ ಸತ್ಯನಾರಾಯಣ (ಮಾಜಿ ಪಾಲಿಕೆ ಸದಸ್ಯರು) ರವರು ಸಭೆಯಲ್ಲಿ ಮಾತನಾಡಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಮ್ಯಾನ್‌ಹೋಲ್‌ಗಳನ್ನು ಸರಿಪಡಿಸುವಂತೆ ಹಾಗೂ ಮುಂದಿನ ಸಭೆಗೆ ತಪ್ಪದೇ ಹಾಜರಾಗಲು ಪತ್ರ ಬರೆಯುವಂತೆ ನೋಡಲ್ ಅಧಿಕಾರಿಯವರಿಗೆ ತಿಳಿಸಿದರು.

ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸೂಕ್ತ ಕ್ರಮವಹಿಸಲು ಕಾರ್ಯದರ್ಶಿಯವರಿಗೆ ಸೂಚಿಸಿದರು.

14) ಶ್ರೀ ನವೀನ್ ನಾಗರೀಕರು ಮಾತನಾಡಿ ಮ್ಯಾನ್‌ಹೋಲ್‌ಗಳಲ್ಲಿ ಹೂಳನ್ನು ತೆಗೆಯುತ್ತಿದ್ದು, ಅದನ್ನು ಮ್ಯಾನ್‌ಹೋಲ್‌ಗಳ ಬಳಿಯೇ ಬಿಡುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತದೆ ಹಾಗೂ ಇದರಿಂದ ಸಾಂಕ್ರಾಮಿ ರೋಗಗಳು ಹರಡುವ ಸಂಭವಿರುತ್ತದೆ. ಆದುದರಿಂದ ಕೂಡಲೇ ಹೂಳನ್ನು ತೆರವುಗೊಳಿಸುವಂತೆ ಸಭೆಗೆ ತಿಳಿಸಿದರು.

ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆಯುವಂತೆ ಕಾರ್ಯದರ್ಶಿಯವರಿಗೆ ಸೂಚಿಸಿದರು.

15) ಶ್ರೀ ನವೀನ್ ನಾಗರೀಕರು ಮಾತನಾಡಿ ವಾರ್ಡ್ ನಂ.159ರ ವ್ಯಾಪ್ತಿಯಲ್ಲಿ ನಾಯಿಗಳ ಹಾವಳಿಯು ಹೆಚ್ಚಾಗಿದ್ದು, ಈ ಬಗ್ಗೆ ಕ್ರಮ ವಹಿಸುವಂತೆ ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆಯುವಂತೆ ಸಭೆಯಲ್ಲಿ ಕೋರಿದರು.

ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆಯುವಂತೆ ಕಾರ್ಯದರ್ಶಿಯವರಿಗೆ ಸೂಚಿಸಿದರು.

16) ಶ್ರೀಮತಿ ಲಾವಣ್ಯ(ನಾಗರೀಕರು) ರವರು ಮಾತನಾಡಿ ಶಿರ್ಕೆ ಸುತ್ತಮುತ್ತ ಕಳ್ಳತನ ನಡೆಯುತ್ತಿರುವುದರ ಬಗ್ಗೆ ಸಭೆಯ ಗಮನಕ್ಕೆ ತಂದರು.

ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಪೋಲೀಸ್ ಇಲಾಖೆಗೆ ಪತ್ರ ಬರೆಯುವಂತೆ ಕಾರ್ಯದರ್ಶಿಯವರಿಗೆ ಸೂಚಿಸಿದರು.

17) ಶ್ರೀ ಸತ್ಯನಾರಾಯಣ (ಮಾಜಿ ಪಾಲಿಕೆ ಸದಸ್ಯರು) ರವರು ಸಭೆಯಲ್ಲಿ ಮಾತನಾಡಿ ರೈಲ್ವೇ ಬ್ರಿಡ್ಜ್ ಕೆಳಗೆ ಲೈಟ್‌ನ್ನು ಅಳವಡಿಸುವಂತೆ ಸಭೆಯಲ್ಲಿ ಕೋರಿದರು.

ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸಂಬಂಧಪಟ್ಟ ಇಲಾಖೆಗೆ ಪತ್ರ ಬರೆಯುವಂತೆ ಕಾರ್ಯದರ್ಶಿಯವರಿಗೆ ಸೂಚಿಸಿದರು.

18) ಶ್ರೀ ನಾಗರಾಜು (ನಾಗರೀಕರು) ಸಚ್ಚಿದಾನಂದ ನಗರದಲ್ಲಿ ರಸ್ತೆಯನ್ನು ಅಭಿವೃದ್ಧಿಪಡಿಸುವಂತೆ ಸಭೆಗೆ ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತನಾಡಿ ಸೂಕ್ತ ಕ್ರಮ ವಹಿಸುವಂತೆ ವಾರ್ಡ್ ನಂ.159ರ ಸಹಾಯಕ ಅಭಿಯಂತರರಿಗೆ ಸೂಚಿಸಿದರು.

ಮುಂದಿನ ಸಭೆಗೆ ಎಲ್ಲಾ ಇಲಾಖೆಯಿಂದ ಅಧಿಕಾರಿಗಳು ವಾರ್ಡ್ ಕಮಿಟಿ ಸಭೆಗೆ ತಪ್ಪದೇ ಹಾಜರಾಗಿ ಸಾರ್ವಜನಿಕರ ಸಮಸ್ಯೆಗಳನ್ನು ಪರಿಹರಿಸುವಂತೆ ಸೂಚಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

([illegible]ಟರಾಜು)
ಕಾರ್ಯದರ್ಶಿ
ವಾರ್ಡ್-159, ಕೆಂಗೇರಿ

(ಬಸವರಾಜು)
ನೋಡಲ್ ಅಧಿಕಾರಿ
ವಾರ್ಡ್-159, ಕೆಂಗೇರಿ

REDMI NOTE 5 PRO
MI DUAL CAMERA

Scanned with CamScanner